CW-04
PW-02

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು.**

ಎಸ್.ಸಿ. ಸಂಖ್ಯೆ: 67/2024

ದಿ. 01-07-2026

(ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು )

ಚಾಸಾ-04
ಫ್ರಾಸಾ-02

| | |
|---|---|
| ಸಾಕ್ಷಿದಾರರ ಹೆಸರು | ಹನುಮಪ್ಪ |
| ತಂದೆಯ ಹೆಸರು | ನಾಗಪ್ಪ |
| ವಯಸ್ಸು | 52 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ರಬ್ಬನಕಲ್ |

**ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ-**

1. ಚಾಸಾ-1, 5, 6, 8 ನನ್ನ ಸಂಬಂಧಿಕರು. ಚಾಸಾ-7, 9 ನನ್ನ ಪರಿಚಿತರು. ಆರೋಪಿತರು ಗೊತ್ತು. ನಮಗೂ ಮತ್ತು ಆರೋಪಿತರ ನಡುವೆ ಯಾವುದೇ ಗಲಾಟೆಯಾಗಿಲ್ಲ. ಆರೋಪಿತರು ನಮಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ. ಜೀವದ ಬೆದರಿಕೆ ಹಾಕಿಲ್ಲ. ಕೈಗಳಿಂದ, ಕಟ್ಟಿಗೆಗಳಿಂದ, ಚಪ್ಪಲಿಯಿಂದ ಹೊಡೆದಿಲ್ಲ, ಮತ್ತು ಚಾಸಾ-6 ರವರಿಗೆ ಮಾನಕ್ಕೆ ಕುಂದು ಉಂಟು ಮಾಡಿಲ್ಲ. ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲ. ಈ ಘಟನೆಯ ಸಂಬಂಧ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

CW-04
PW-02

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ವಿಶೇಷ ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ವಿಶೇಷ ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಸಾರ್ವಜನಿಕ ಅಭಿಯೋಜಕರಿಂದ**

2. ದಿಃ 10-12-2022 ರಂದು, ರಬ್ಬನಕಲ್ ಗ್ರಾಮದ ರಾಮಕ್ಕಮ್ಮ ದೇವಸ್ಥಾನದ ದುಡ್ಡನ್ನು ಲೆಕ್ಕ ಪತ್ರ ಮಾಡುವ ವಿಷಯಕ್ಕೆ ಸಂಬಂಧಿಸಿದಂತೆ ನಾವು ಮತ್ತು ಆರೋಪಿತರು ದೇವಸ್ಥಾನದ ಹತ್ತಿರ ಸೇರಿದ್ದೆವು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಮಳೆಯು ಬರುತ್ತಿರುವುದರಿಂದ ದೇವಸ್ಥಾನದ ಸುತ್ತಮುತ್ತಲೂ ಕೇಸರಾಗಿದ್ದರಿಂದ ನಾವು ಮತ್ತು ಆರೋಪಿತರು ಮತ್ತು ಊರಿನ ಜನರು ದೇವಸ್ಥಾನದ ದುಡ್ಡಿನ ಲೆಕ್ಕಪತ್ರ ಮಾಡಲು ದಿಃ 11-12-2022 ರಂದು ಪುನಃ 1 ನೇ ಆರೋಪಿಯ ಮನೆಯ ಅಂಗಳದಲ್ಲಿ ಸೇರಿದ್ದೆವು ಎಂದರೆ ಸರಿಯಲ್ಲ. ಬೆಳಿಗ್ಗೆ 10-30 ರ ಸಮಯದಲ್ಲಿ ಆರೋಪಿತರು ದೇವಸ್ಥಾನದ ಲೆಕ್ಕಪತ್ರ ಮಾಡಲು ನೀವೇಕೆ ಇಲ್ಲಿ ಬಂದಿರುತ್ತೀರಿ ಸೂಳೆಮಕ್ಕಳೇ ಎಂದು ನಮ್ಮೊಂದಿಗೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದರೆ ಸರಿಯಲ್ಲ, ಆಗ 1 ನೇ ಆರೋಪಿ ನಮಗೆ ಲಂಗಾ ಸೂಳೆಮಕ್ಕಳೇ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದರೆ ಸರಿಯಲ್ಲ. 1 ನೇ ಆರೋಪಿ ಕಟ್ಟಿಗೆಯಿಂದ ನನಗೆ ಮೈ ಕೈಗೆ ಹೊಡೆದಿರುತ್ತಾರೆಂದರೆ ಸರಿಯಲ್ಲ. ಆರೋಪಿ 2 ರಿಂದ 4 ರವರು ಕೈಗಳಿಂದ ಚಾಸಾ-4 ಮತ್ತು 5 ರವರಿಗೆ ಹೊಡೆದಿರುತ್ತಾರೆಂದರೆ ಸರಿಯಲ್ಲ. ಬಿಡಿಸಲು ಬಂದ ಚಾಸಾ-6 ರವರಿಗೆ 2 ನೇ

CW-04
PW-02

ಆರೋಪಿತನು ಚೇನಾಲಿ ಸೂಳೆ ಯಾಕೆ ಅಡ್ಡ ಬರುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು, ಮೈ ಕೈ ಮುಟ್ಟಿ ಸೀರೆ ಹಿಡಿದು ಎಳೆದಾಡಿ ಕೈಗಳಿಂದ ಹೊಡೆದು, ಮಾನಕ್ಕೆ ಕುಂದು ಉಂಟು ಮಾಡಿರುತ್ತಾರೆಂದರೆ ಸರಿಯಲ್ಲ. ಆರೋಪಿತರೆಲ್ಲರೂ ನಮ್ಮನ್ನು ಜೀವಸಹಿತ ಬಿಡುವುದಿಲ್ಲ ಕೊಂದು ಹಾಕುತ್ತೇವೆಂದು ಜೀವದ ಬೆದರಿಕೆ ಹಾಕಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ಅಭಿಯೋಜನೆಯ ಪರವಾಗಿ ನಿಪಿ-4 ಎಂದು ಗುರುತಿಸಲಾಯಿತು. ನಾನು ಆರೋಪಿತರೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲಃ ಶ್ರಿ ಆರ್.ಎಸ್. ವಕೀಲರಿಂದ ಆರೋಪಿತರ ಪರಃ**

ಏನೂ ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಮಾಲ ಎನ್.ಡಿ.)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಯಚೂರು.